**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ನ್ಯಾಯಾಲಯ, ದೇವದುರ್ಗ.**

**CC No.672/2023**

**CW -6 PW-5**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ದೇವಮ್ಮ |
| ಗಂಡ | ಃ | ಯಲ್ಲಪ್ಪ |
| ವಯಸ್ಸು | ಃ | 32 |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಮಾತ್ಪಳ್ಳಿ |
| ಪ್ರಮಾಣಿಕರಿಸಿದ ದಿನಾಂಕ | ಃ | **17-04-2026** |

---

**ಮುಖ್ಯ ವಿಚಾರಣೆ:-** **ಮಾನ್ಯ ಸ.ಸ.ಅ ರವರಿಂದ**

ಚಾಸಾ-1, 4 ಮತ್ತು 5 ಸಂಬಂಧಿಕರು, ಆರೋಪಿತರು ಗೊತ್ತು. ಈಗ 2 ವರ್ಷದ ಹಿಂದೆ ಸಂಜೆ 05.30 ಗಂಟೆಗೆ ಮಾತ್ಪಳ್ಳಿ ಗ್ರಾಮದ ಯಲ್ಲಮ್ಮ ಗುಡಿಯಲ್ಲಿ ಪೂಜೆ ಕಾರ್ಯ ಇದ್ದು ಗ್ರಾಮದ ಜನರು ಸೇರಿದ್ದರು. ಸದರಿ ಪೂಜೆ ಸಮಯದಲ್ಲಿ ನಾನು ಚಾಸಾ-1, 4 ಮತ್ತು 5 ಹಾಗೂ ಯಲ್ಲಪ್ಪ ಇದ್ದೆವು. ಆರೋಪಿತರು ಚಾಸಾ-4 ರವರ ಜೊತೆ ಜಗಳ ತೆಗೆದು ಚಾಸಾ-1 ಮತ್ತು 4 ರವರಿಗೆ ಆರೋಪಿತರು ಹೊಡೆದಿರುತ್ತಾರೆ. ಚಾಸಾ-4 ರವರಿಗೆ ಭೀಮಪ್ಪನ ಮಕ್ಕಳು ಕಲ್ಲಿನಿಂದ ತಲೆಗೆ, ಮೈಗೆ ಹೊಡೆದರು, ಚಾಸಾ-1 ರವರಿಗೆ 5 ನೇ ಆರೋಪಿ ಯಲ್ಲಮ್ಮ ಕೂದಲು ಹಿಡಿದು ಎಳೆದಾಡಿ ಕೈಯಿಂದ ಹೊಡೆದು, ಯಲ್ಲಮ್ಮ ಮತ್ತು ನಾಗಮ್ಮ ಆರೋಪಿತರು ಚಾಸಾ-1 ರವರ ಸೀರೆ ಹಿಡಿದು ಎಳೆದಾಡಿರುತ್ತಾರೆ. ಆ ಕುರಿತು ನಾನು ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು:-** **ಆರೋಪಿತರ ಪರ SBK ವಕೀಲರಿಂದ**

ಚಾಸಾ-3 ಮತ್ತು 4, 5 ನನ್ನ ಸಂಬಂಧಿಕರು. ಘಟನೆ ನಡೆದ ದಿನಾಂಕ ತಿಂಗಳು ಹೇಳಲು ಬರುವುದಿಲ್ಲ. ಅಂದು ಮಗಳವಾರ ಇತ್ತು ಎಂದು ನುಡಿಯುತ್ತಾರೆ. ಸದರಿ ಗುಡಿ ಹತ್ತಿರ ಗ್ರಾಮಸ್ಥರು ಎಲ್ಲರೂ ಪೂಜೆಗಾಗಿ ಸೇರಿದ್ದರು. ಅಂದಾಜು 100-200 ಜನ ಸೇರಿದ್ದರು. ಸದರಿ ಜನ ದಟ್ಟಣೆ ಇದುದ್ದರಿಂದ ಘಟನೆ ಹೇಗೆ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಕಲ್ಲಿಗೆ ರಕ್ತದ ಕಲೆ ಹತ್ತಿತ್ತು. ಸದರಿ ರಕ್ತದ ಕಲೆ ಹತ್ತಿದ ಕಲ್ಲನ್ನು ಪೋಲಿಸರು ತೆಗೆದುಕೊಂಡಿರುತ್ತಾರೆ. ಚಾಸಾ-1 ರವರ ಸೀರೆ ಹಸಿರು ಬಣ್ಣದ್ದು ಆಗಿತ್ತು. ನನ್ನ ಹೇಳಿಕೆಯಲ್ಲಿ ಚಾಸಾ-1 ರವರ ಧರಿಸಿದ್ದ ಹಸಿರು ಬಣ್ಣದ ಸೀರೆಯನ್ನು ಹಿಡಿದು ಎಳೆದಡಿರುತ್ತಾರೆ ಎಂದು ಹೇಳಿ ಬರೆಸಿರುತ್ತೇನೆ. ಸದರಿ ಸೀರೆ ಘಟನೆಯಲ್ಲಿ ಹರಿದಿತ್ತು. ಸದರಿ

ಸೀರೆಯನ್ನು ಪೋಲಿಸರು ಜಪ್ತಿ ಮಾಡಿಕೊಂಡಿರುತ್ತಾರೆ. ಸದರಿ ಸೀರೆ ಹರೆದ ವಿಚಾರವನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ದೂರು ನೀಡಲು ನಾವು ಠಾಣೆಗೆ 10 ಜನ ಹೋಗಿರುತ್ತೇವೆ. ಪೋಲಿಸರು ನನ್ನನ್ನು ದೂರು ಕೊಡಲು ಹೋದಾಗ ವಿಚಾರಣೆ ಮಡಿರುತ್ತಾರೆ. ಪೋಲಿಸರು ನನ್ನ ಹೇಳಿಕೆ ಪಡೆದ ದಿನಾಂಕ ಹೇಳಲು ನೆನಪಿರುವುದಿಲ್ಲ. ಯಾವುದೇ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಚಾಸಾ-4 ರವರ ನಡುವೆ ಜಮೀನು ವಿಷಯವಾಗಿ ವೈಮನಸ್ಸು ಇದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.